KABG210041572020

**1** ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ

ಸಿ.ಸಿ. ನಂಃ **2594/2020**

ಫಿರ್ಯಾದುದಾರರು **1)** ಸರಕಾರದ ವತಿಯಿಂದ
ಐಗಳಿ ಪೋಲಿಸ ಠಾಣೆ.

ವಿರುದ್ಧ

ಆರೋಪಿತರು **1)** ಶ್ರೀ ಮಹಾದೇವ ಶಂಕರ ಬಡಚಿ ಮತ್ತು ಇತರರು.

ದೋಷಾರೋಪಣೆ

ಶ್ರೀ ಪ್ರಶಾಂತ ನಾಗಲಾಪೂರ, ಬಿ.ಬಿ.ಎ., ಎಲ್.ಎಲ್.ಬಿ., **1** ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ ಆದ ನಾನು ನಿಮ್ಮ ಮೇಲೆ ಅಂದರೆ ಆರೋಪಿಗಳುಃ

**1)** ಶ್ರೀ ಮಹಾದೇವ ಶಂಕರ ಬಡಚಿ ,
ವಯಾಃ **55** ವರ್ಷ, ಉದ್ಯೋಗಃ ಶೇತ್ಕಿ,
ಸಾಃ ಬೊಸಲೆವಾಡಿ, ತಾಃ ಅಥಣಿ.

**2)** ಶ್ರೀಮತಿ ಸುರೇಖಾ ಮಹಾದೇವ ಬಡಚಿ,
ವಯಾಃ **45** ವರ್ಷ, ಉದ್ಯೋಗಃ ಶೇತ್ಕಿ,
ಸಾಃ ಬೊಸಲೆವಾಡಿ, ತಾಃ ಅಥಣಿ.

**3)** ಶ್ರೀ ಸಾಗರ ಮಹಾದೇವ ಬಡಚಿ,
ವಯಾಃ **19** ವರ್ಷ, ಉದ್ಯೋಗಃ ಶೇತ್ಕಿ,
ಸಾಃ ಬೊಸಲೆವಾಡಿ, ತಾಃ ಅಥಣಿ.

**4)** ಶ್ರೀ ಪಾಂಡುರಂಗ ಶಂಕರ ಬಡಚಿ,
ವಯಾಃ **53** ವರ್ಷ, ಉದ್ಯೋಗಃ ಶೇತ್ಕಿ,
ಸಾಃ ಬೊಸಲೆವಾಡಿ, ತಾಃ ಅಥಣಿ.

**5)** ಶ್ರೀಮತಿ ಸುನೀತಾ ಪಾಂಡುರಂಗ ಬಡಚಿ,
ವಯಾಃ **48** ವರ್ಷ, ಉದ್ಯೋಗಃ ಶೇತ್ಕಿ,
ಸಾಃ ಬೊಸಲೆವಾಡಿ, ತಾಃ ಅಥಣಿ.

**6)** ಶ್ರೀ ಅಶೋಕ ಪಾಂಡುರಂಗ ಬಡಚಿ,
ವಯಾಃ **27** ವರ್ಷ, ಉದ್ಯೋಗಃ ಶೇತ್ಕಿ,
ಸಾಃ ಬೊಸಲೆವಾಡಿ, ತಾಃ ಅಥಣಿ.

**7)** ಶ್ರೀ ಸಂತೋಷ ಪಾಂಡುರಂಗ ಬಡಚಿ,
ವಯಾಃ **25** ವರ್ಷ, ಉದ್ಯೋಗಃ ಶೇತ್ಕಿ,
ಸಾಃ ಬೊಸಲೆವಾಡಿ, ತಾಃ ಅಥಣಿ.

**8)** ಶ್ರೀಮತಿ ಮಾಲಾಬಾಯಿ ಗೋರಖ ಚವ್ಹಾಣ,
ವಯಾಃ **50** ವರ್ಷ, ಉದ್ಯೋಗಃ ಶೇತ್ಕಿ,
ಸಾಃ ಬೊಸಲೆವಾಡಿ, ತಾಃ ಅಥಣಿ.

ಈ ಕೆಳಗಿನಂತೆ ದೋಷಾರೋಪಣೆಯನ್ನು ಹೊರೆಸಿದ್ದೇನೆ.

ದಿನಾಂಕ **17-05-2020** ರಂದು ಸಮಯ ಬೆಳಿಗ್ಗೆ **11.30** ಗಂಟೆ ಸುಮಾರಿಗೆ ಐಗಳಿ ಪೋಲಿಸ ಠಾಣಾ ಸರಹದ್ದಿನ, ಘಡತರವಾಡಿ ಗ್ರಾಮದ ಹದ್ದಿಯ ಜಮೀನು ರಿ.ಸ.ನಂಃ **280** ನೇದ್ದರಲ್ಲಿ, ಪಿರ್ಯಾದಿಯ ಅಳಿಯ ಚಾಸಾ **4** ಮತ್ತು ಆರೋಪಿತರ ನಡುವೆ ಜಮೀನಿನ ವಿಷಯಕ್ಕೆ ಸಂಬಂಧಪಟ್ಟಂತೆ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಅಕ್ರಮ ಕೂಟ ರಚಿಸಿಕೊಂಡಿರುವಿರಿ., ನಿಮ್ಮ ಈ ಕ್ರಮ ಭಾರತ ದಂಡ ಸಂಹಿತ ಕಲಂಃ **143** ಸಹ ಕಲಂಃ **149** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾದವೆಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ದೊಂಬಿ ಮಾಡುವ ಉದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡಿರುವಿರಿ., ನಿಮ್ಮ ಈ ಕ್ರಮ ಭಾರತ ದಂಡ ಸಂಹಿತ ಕಲಂಃ **147** ಸಹ ಕಲಂಃ **149** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾದವೆಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರಾದ ನೀವುಗಳು ಏಕ್ಕೋದ್ದೇಶದಿಂದ ಮಾರಾಕಾಯುದಗಳನ್ನು ಹೊಂದಿ ಅಕ್ರಮಕೂಟವನ್ನು ರಚಿಸಿಕೊಂಡು ಸದರೀ ಅಕ್ರಮಕೂಟದ ಸದಸ್ಯರಾಗಿ ದೊಂಬಿ ಮಾಡಿ, ಭಾರತ ದಂಡ ಸಂಹಿತೆ ಕಲಂಃ **148** ಸಹ ವಾಚಕ ಕಲಂಃ **149** ರಡಿ ಶಿಕ್ಷಾರ್ಹ ಅಪರಾದ ವೆಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರಾದ ನೀವುಗಳು ಅಕ್ರಮಕೂಟದ ಸದಸ್ಯರಾಗಿ ಬಂದು, ಚಾಸಾ **4** ರವರು ಪಿರ್ಯಾದಿಯ ಜಮೀನಿನಲ್ಲಿ ಇದ್ದಾಗ, ಆರೋಪಿ ನಂಃ **1, 3** ಮತ್ತು **4** ರವರು ಜಮೀನಿನ ವಿಷಯಕ್ಕೆ ಸಂಬಂಧಪಟ್ಟಂತೆ ತಂಟೆ ತೆಗೆದು ಕಲ್ಲಿನಿಂದ ಹೊಡೆಯುತ್ತಿದ್ದಾಗ, ಚಾಸಾ **1,** ಚಾಸಾ **5** ಮತ್ತು ಚಾಸಾ **7** ರವರು ಕೂಡಿಕೊಂಡು ಜಗಳವನ್ನು ಬಿಡಿಸಿಕೊಳ್ಳಲು, ಆರೋಪಿ ನಂಃ **3, 6** ಮತ್ತು **7** ರವರು ಚಾಸಾ **5** ರವರಿಗೆ ಕೈಯಿಂದ ಹೊಡೆ - ಬಡೆ ಮಾಡಿ, ಸಾಮಾನ್ಯ ಸ್ವರೂಪದ ಗಾಯಪಡಿಸಿರುವಿರಿ, ನಿಮ್ಮ ಈ ಕ್ರಮ ಭಾರತ ದಂಡ ಸಂಹಿತ ಕಲಂ **323** ಸಹ ಕಲಂ **149** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾದವೆಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರಾದ ನೀವುಗಳು ಅಕ್ರಮಕೂಟದ ಸದಸ್ಯರಾಗಿ ಬಂದು, ಚಾಸಾ **4** ರವರು ಪಿರ್ಯಾದಿಯ ಜಮೀನಿನಲ್ಲಿ ಇದ್ದಾಗ, ಆರೋಪಿ ನಂಃ **1, 3** ಮತ್ತು **4** ರವರು ಜಮೀನಿನ ವಿಷಯಕ್ಕೆ ಸಂಬಂಧಪಟ್ಟಂತೆ ತಂಟೆ ತೆಗೆದು ಕಲ್ಲಿನಿಂದ ಹೊಡೆದು, ಸಾಮಾನ್ಯ ಸ್ವರೂಪದ ಗಾಯಪಡಿಸಿರುವಿರಿ, ನಿಮ್ಮ ಈ ಕ್ರಮ ಭಾರತ ದಂಡ ಸಂಹಿತ ಕಲಂ **324** ಸಹ ಕಲಂ **149** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾದವೆಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರಾದ ನೀವುಗಳು ಅಕ್ರಮಕೂಟದ ಸದಸ್ಯರಾಗಿ ಬಂದು, ಚಾಸಾ **4** ರವರು ಪಿರ್ಯಾದಿಯ ಜಮೀನಿನಲ್ಲಿ ಇದ್ದಾಗ, ಆರೋಪಿ ನಂಃ **1, 3** ಮತ್ತು **4** ರವರು ಜಮೀನಿನ ವಿಷಯಕ್ಕೆ ಸಂಬಂಧಪಟ್ಟಂತೆ ತಂಟೆ ತೆಗೆದು ಕಲ್ಲಿನಿಂದ ಹೊಡೆಯುತ್ತಿದ್ದಾಗ, ಚಾಸಾ **1,** ಚಾಸಾ **5** ಮತ್ತು ಚಾಸಾ **7** ರವರು ಕೂಡಿಕೊಂಡು ಜಗಳವನ್ನು ಬಿಡಿಸಿಕೊಳ್ಳಲು, ಆರೋಪಿ ನಂಃ **2** ಮತ್ತು **5** ರವರು ಚಾಸಾ **1** ರವರ ಬಲಗೈ ಹೆಬ್ಬೆಳಿಗೆ ಹೊಡೆದು, ತೀವ್ರ ಸ್ವರೂಪದ ಗಾಯಪಡಿಸಿರುವಿರಿ, ನಿಮ್ಮ ಈ ಕ್ರಮ ಭಾರತ ದಂಡ ಸಂಹಿತ ಕಲಂ **326** ಸಹ ಕಲಂ **149** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾದವೆಸಗಿರುತ್ತೀರಿ.

ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ, ಆರೋಪಿತರಾದ ನೀವುಗಳು ಅಕ್ರಮಕೂಟದ ಸದಸ್ಯರಾಗಿ ಬಂದು, ಚಾಸಾ **4** ರವರು ಪಿರ್ಯಾದಿಯ ಜಮೀನಿನಲ್ಲಿ ಇದ್ದಾಗ, ಆರೋಪಿ ನಂಃ **1, 3** ಮತ್ತು **4** ರವರು ಜಮೀನಿನ ವಿಷಯಕ್ಕೆ ಸಂಬಂಧಪಟ್ಟಂತೆ ತಂಟೆ ತೆಗೆದು ಕಲ್ಲಿನಿಂದ ಹೊಡೆದು, ಚಾಸಾ **1,** ಚಾಸಾ **5** ಮತ್ತು ಚಾಸಾ **7** ರವರು ಕೂಡಿಕೊಂಡು ಜಗಳವನ್ನು ಬಿಡಿಸಿಕೊಳ್ಳಲು, ಆರೋಪಿ

ನಂಃ **2** ಮತ್ತು **5** ರವರು  ಚಾಸಾ **1** ರವರ ಬಲಗೈ ಹೆಬ್ಬಳಿಗೆ ಹೊಡೆದು**,** ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುವಿರಿ**,** ನಿಮ್ಮ ಈ ಕ್ರಮ ಭಾರತ ದಂಡ ಸಂಹಿತ ಕಲಂ **504** ಸಹ ಕಲಂ **149** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾದವೆಸಗಿರುತ್ತೀರಿ.

ಅದೇ ದಿನ**,** ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ**,** ಆರೋಪಿತರಾದ ನೀವುಗಳು ಅಕ್ರಮಕೂಟದ ಸದಸ್ಯರಾಗಿ ಬಂದು**,** ಚಾಸಾ **4** ರವರು ಪಿರ್ಯಾದಿಯ ಜಮೀನಿನಲ್ಲಿ ಇದ್ದಾಗ**,** ಆರೋಪಿ ನಂಃ **1, 3** ಮತ್ತು **4** ರವರು ಜಮೀನಿನ ವಿಷಯಕ್ಕೆ ಸಂಬಂಧಪಟ್ಟಂತೆ ತಂಟೆ ತೆಗೆದು ಕಲ್ಲಿನಿಂದ ಹೊಡೆದು**,** ಚಾಸಾ **1,** ಚಾಸಾ **5** ಮತ್ತು ಚಾಸಾ **7** ರವರು ಕೂಡಿಕೊಂಡು ಜಗಳವನ್ನು ಬಿಡಿಸಿಕೊಳ್ಳಲು**,** ಆರೋಪಿ ನಂಃ **2** ಮತ್ತು **5** ರವರು  ಚಾಸಾ **1** ರವರ ಬಲಗೈ ಹೆಬ್ಬಳಿಗೆ ಹೊಡೆದು**,** ಅವಾಚ್ಯ ಶಬ್ದಗಳಿಂದ ಬೈದು**,** ಇದೊಂದು ಸಲ ಉಳದದಿ**,** ಇನ್ನೊಮ್ಮೆ ನಮ್ಮ ತಂಟೆಗೆ ಬಂದರೆ ನಿಮ್ಮನ್ನು ಜೀವಂತ ಬಿಡುವುದಿಲ್ಲಾ ಎಂದು ಜೀವ ಧಮಕಿ ಹಾಕಿರುವಿರಿ**,** ನಿಮ್ಮ ಈ ಕ್ರಮ ಭಾರತ ದಂಡ ಸಂಹಿತ ಕಲಂ **506** ಸಹ ಕಲಂ **149** ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾದವೆಸಗಿರುತ್ತೀರಿ.

ಮೇಲಿನ ಆರೋಪಣೆಗೆ ನೀವು ಈ ನ್ಯಾಯಾಲಯದ ಮುಂದೆ ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ**.**

ದಿನಾಂಕಃ 20.03.2023

**1** ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ**.**ಎಂ**.**ಎಫ್**.**ಸಿ**.** ಅಥಣಿ**.**